ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

*ಮನಸ್ಸಿದ್ದಲ್ಲಿ ಮಾರ್ಗ. ಮಾರ್ಗವೆಲ್ಲ ವಾಹನಗಳಿಂದ ತುಂಬಿ ತುಳುಕಾಡುತ್ತಿದ್ದರೆ...?*




ಫುಲ್ ಸೀರಿಯಸ್ಸಾಗಿ ಆಲೋಚಿಸಿ. ಯಾವುದಾದರೂ ಪರಿಹಾರದ ಆ್ಯಂಬುಲೆನ್ಸ್ ದಾರಿ ಮಾಡಿಕೊಂಡು ಒಯ್ಯುತ್ತದೆ.

ಕೆ.ಜಿ. ಶೇಖರಪ್ಪ, ಅರಸೀಕೆರೆ

*ಮೊಬೈಲ್‌ನಲ್ಲಿ ಜಾಸ್ತಿ ಮಾತನಾಡುವವರು ಹೆಂಗಸರೋ, ಗಂಡಸರೋ?*

ದಿಸ್ ರೂಟ್ ಈಸ್ ಬಿಜಿ; ಡಯಲ್ ಮಾಡಿದ ಸಂಖ್ಯೆ ಪರೀಕ್ಷಿಸಿ ಇತ್ಯಾದಿ ಹೇಳುವ ರೆಕಾರ್ಡೆಡ್ ಹೆಣ್ಣು.

ಮಾಧುರಿ ಮ. ನಾಯಕ, ಬೆಳಗಾವಿ

*ತಾವು ವಿದ್ಯಾರ್ಥಿಯಾಗಿದ್ದಾಗ ಅಭ್ಯಾಸ ಮಾಡದ ಪಾಲಕರು ತಮ್ಮ ಮಕ್ಕಳ ಜೊತೆಗೆ ಅಭ್ಯಾಸ ಮಾಡುವುದೇಕೆ?*

ಆ ವಯಸ್ಸಿನಲ್ಲಿ ಇರಬೇಕಾಗಿದ್ದ ಬುದ್ಧಿ ಈಗ ಬಂದಿದೆಯಂತೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

*ನಿಮ್ಮ ಮನಸ್ಸಿನಲ್ಲಿ ನೋವು ಇದೆಯಾ ಅಂತ ಕೇಳೋ ಜನರೇ ಇಲ್ಲವಲ್ಲ ಸಾರ್?*




ಕೇಳಿದರೂ ನೋವು ಹಂಚಲು ನಾನೇನು ಸೀರಿಯಲ್ಲೇ? ಜಗದ ಟಾನಿಕ್ ಎಂದರೆ ನಗೆಯೊಂದೇ.

ಕುಮಾರ ಚಲವಾದಿ, ಹಾಸನ

*ದೇವರಿಗೂ ಹೆದರದವರು ಇನ್ನಾರಿಗೆ ಹೆದರುತ್ತಾರೆ?*

ಹೈಕಮಾಂಡ್‌ಗೆ, ಐಟಿ ರೈಡ್‌ಗೆ.

ಹಾಡ್ಯ ಬ. ಜಯಾನಂದ, ಮೈಸೂರು

*ಮೋದೀಜಿಯ ಫಿಟ್‌ನೆಸ್ ಚಾಲೆಂಜ್ ಲಿಸ್ಟ್‌ನಲ್ಲಿ ನಿಮ್ಮ ಹೆಸರಿದೆಯಂತೆ. ಏನು ಮಾಡುತ್ತೀರಿ?*

ಉತ್ತರಿಸುವುದಕ್ಕೆ ತಲೆ ಒಡಿಸುವ ಚಾಲೆಂಜ್‌ಗೆ ಆಹ್ವಾನಿಸುತ್ತೇನೆ.

ಪಿ. ಚಿದಾನಂದ, ಜವನಗೊಂಡನಹಳ್ಳಿ

*ಹೆಂಡತಿಯನ್ನು ಧರ್ಮಪತ್ನಿ ಎನ್ನುವಂತೆ ಗಂಡನನ್ನು ಧರ್ಮಪತಿ ಎಂದು ಕರೆಯುವುದಿಲ್ಲ. ಏಕೆ?*

ಹಾಗೆ ಕರೆದಾಕ್ಷಣ ಏನಾದರೂ ಧರ್ಮ ಮಾಡಿ ಮಾವ ಎಂದು ನಿಂತುಬಿಟ್ಟಾನೆಂಬ ಭಯ.

ಎಂ.ಜಿ. ಉಮಾ, ಬಳ್ಳಾರಿ

*ಧೃತರಾಷ್ಟ್ರನ ಹೆಂಡತಿ ಗಾಂಧಾರಿ ಕಲಿಯುಗದಲ್ಲಿ ಇದ್ದಿದ್ದರೆ?*

ಗಂಡನಿಗೆ ಬ್ರೈಲ್ ಕಲಿಸಿ, ಅವನನ್ನು ಪ್ರಧಾನಿಯಾಗಿಸಿ, ತಾನು ಹೈಕಮಾಂಡ್ ಆಗುತ್ತಿದ್ದಳು.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

*ಮತವೆನ್ನುವುದು ಅತ್ಯಂತ ಪವಿತ್ರ. ಆದರೆ ಮತದಿಂದಲೇ ಆಯ್ಕೆಯಾದವರು ಅಪಾತ್ರರಾಗಿ ಉಳಿಯುವುದೇಕೆ?*

ಪವಿತ್ರ ಜಲದಲ್ಲಿಯೂ ಬ್ಯಾಕ್ಟೀರಿಯ ಸೇರಿ ಇನ್‌ಫೆಕ್ಷನ್ ಆಗುತ್ತದೆ. ಇದೂ ಹಾಗೆಯೇ.

ತಲಕಾಡು ಶ್ರೀನಿಧಿ, ಬೆಂಗಳೂರು

*ಮದುವೆ ಏಕೆ ಬೇಕು ಎಂಬ ಇಂದಿನ ಯುವ ಪೀಳಿಗೆಗೆ ನಿಮ್ಮ ಉತ್ತರ ಏನು ಸಾರ್?*

ಖಾರ ತಿಂದಾಗಲೇ ಸಿಹಿಗೆ ಬೆಲೆ ಕಣ್ರಯ್ಯಾ...

ಎಂ.ಎ. ಕುಮಾರ್, ಬೆಂಗಳೂರು

*ಪತ್ನಿಗೆ ವಿರುದ್ಧ ಪದ ಯಾವುದು?*

ಸವತಿ.

ನರಸಿಂಹ ಪೈ, ಹೊನ್ನಾವರ

*ಮದ್ಯಕ್ಕೆ ಸೆರೆ ಎಂಬ ಬಂಧನ ಸೂಚಕ ಪರ್ಯಾಯ ಪದವೇಕೆ?*

ನುಡಿ ಬಂಧಿಸಿ ತೊದಲಿಸುತ್ತದೆ, ನಡೆ ಬಂಧಿಸಿ ತೊಡರಿಸುತ್ತದೆ, ಜ್ಞಾನ ಬಂಧಿಸಿ ಉರುಳಿಸುತ್ತದೆ...

ಅಮರಯ್ಯ ಪತ್ರಿಮಠ, ಸುರಪುರ

*ನೆರೆಹೊರೆ ನಡುವೆ ಹೇಗಿರಬೇಕು?*

ಕಸ ಬೀಸಿ ಒಗೆದರೂ ಆ ಕಡೆಗೆ ಹೋಗದಷ್ಟು ಎತ್ತರದ ಕಾಂಪೌಂಡ್ ನಡುವೆ ಇರುವುದು ಉತ್ತಮ.

## ಬಹುಮಾನಿತ ಪ್ರಶ್ನೆ

ದಿನೇಶ್, ಗುಡ್ಡದೂರು

*ಎಲ್ಲಾ ದಿನಾಚರಣೆಗಳು ಇರುವಾಗ ಕುಡುಕರ ದಿನಾಚರಣೆ ಏಕಿಲ್ಲ ರಾಮ್?*

ಇದೆಯಲ್ಲ. ಡಿಸೆಂಬರ್ 31 ಕುಡುಕರ ದಿನಾಚರಣೆಯಷ್ಟೇ ಅಲ್ಲ, ರಾತ್ರ್ಯಾಚರಣೆಯೂ ಆಗಿದೆ.

ದಿನೇಶ್, ಗುಡ್ಡದೂರು

*ಇಂದಿನ ದಿನಗಳಲ್ಲಿ ರಾಜಕಾರಣಿಗೂ, ಮಠಾಧೀಶರಿಗೂ ಇರುವ ವ್ಯತ್ಯಾಸವೇನು ರಾಮ್?*

ಇಬ್ಬರೂ ಮತಕ್ಕಾಗಿಯೇ ಪ್ರಚಾರ ಮಾಡಿದರೂ ಅವರು ಕೊಡುವ ತೀರ್ಥವೇ ಬೇರೆ, ಇವರು ಕೊಡುವ ತೀರ್ಥವೇ ಬೇರೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಮನೆಯ ತುಂಬಾ ರಾಜಕಾರಣಿಗಳೇ ತುಂಬಿಕೊಂಡಿದ್ದರೆ ಆ ಮನೆಯ ಸ್ಥಿತಿ ಹೇಗಿರುತ್ತೆ ರಾಮ್?*

ಜಗಳ, ಗಲಾಟೆ, ಸಭಾತ್ಯಾಗ ಇರುವ ಸೆಷನ್ ಸಮಯದ ಪಾರ್ಲಿಮೆಂಟಿನಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಈಗಿನ ಮಕ್ಕಳೇಕೆ ದೊಡ್ಡವರ ಮಾತು ಕೇಳುವುದಿಲ್ಲ?*



ಕೇಳಿಸದಂತೆ ಹೆಡ್‌ಫೋನೋ, ಇಯರ್‌ಫೋನೋ ಅಡ್ಡ ಬರುತ್ತದಲ್ಲ.

ಜಾಕೋಬ್ ಡಿಸೋಜ, ಕುರುವಳ್ಳಿ

*ಚಿಂದಿ ಚಿತ್ರಾನ್ನ ಎಂದರೇನು?*

ಈಗಿನ ಸಮ್ಮಿಶ್ರ ಸರ್ಕಾರ ಎರಡು ಚಿಂದಿಗಳು ಸೇರಿ ಒಂದು ಚಿತ್ರಾನ್ನ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಶವ ಯಾತ್ರೆಯಲ್ಲಿಯೂ ಪಟಾಕಿ ಹಾರಿಸುತ್ತಾರೆ. ಏಕೆ ಗುರು?*

ಘಟ ಢಂ ಎಂದಿತು, ಹೊಗೆ ಹಾಕಿಸಿಕೊಂಡಿತು ಎಂದು ಸೂಚಿಸಲು.

■ ರಾಮ್